ದಿನಾಂಕ 01/04/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀ ಸವಾಲು :- ಶ್ರೀ ಹೆಚ್.ಟಿ.ಟಿ. ಪ್ರತಿವಾದಿ ಪರ ವಕೀಲರಿಂದ**

ದಾವಾ ಆಸ್ತಿ ಮೂಲತಃ ನನಗೆ ಸೇರಿರುತ್ತದೆ. ದಾವಾ ಮೂಲತಃ ನಾರಾಯಣಮ್ಮನಿಗೆ ಸೇರಿತ್ತು ಎಂದರೆ ಸರಿಯಲ್ಲ, ದಾವಾ ಆಸ್ತಿಯ ಖಾತೆ ನಂ-139 ಅದರ ವಿಸ್ತೀರ್ಣ 30 ಇಂಟು 40 ಅಡಿ ಇರುತ್ತದೆ. ಅದಕ್ಕೆ ಚಕ್ಕುಬಂದಿ ಪೂ-ರಂಗಮ್ಮನ ಮನೆ, ಪ-ಸರ್ಕಾರಿ ಜಾಗ, ಉ-ಸರ್ಕಾರಿ ಜಾಗ, ದ-ದಾರಿ ಇರುತ್ತದೆ. ದಿ.22/05/2014 ರಂದು ದಾನ ಪತ್ರ ಆಗಿರುತ್ತದೆ. ಸದರಿ ದಾನ ಪತ್ರ ನೊಂದಾವಣೆ ಆಗಿರುವುದಿಲ್ಲ. ಸದರಿ ದಾನ ಪತ್ರ ಮಧುಗಿರಿ ತಾಲ್ಲೂಕು ಕಛೇರಿಯ ಬಳಿ ಆಗಿರುತ್ತದೆ . ದಾನ ಪತ್ರ ಆಗುವ ಮೊದಲು ಯಾವುದೇ ಮಾತುಕತೆ ಆಗಿರುವುದಿಲ್ಲ. ನಾರಾಯಣಮ್ಮ ಸದರಿ ದಾನ ಪತ್ರ ಬರೆದುಕೊಟ್ಟಿರುತ್ತಾರೆ. ದಾನ ಪತ್ರ ಆಗುವ ಕಾಲಕ್ಕೆ ಶಿವಕುಮಾರ್ , ನವೀನ್ ಇದ್ದರು. ಅವರುಗಳನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ದಾನ ಪತ್ರವನ್ನು ಯಾರು ಬರೆದಿರುತ್ತಾರೆಂದು ಹೇಳಲು ಆಗುವುದಿಲ್ಲ.

2. 200 ರೂಗಳ ಛಾಪಾ ಕಾಗದ ಮೇಲೆ ಬರೆಯಲಾಗಿರುತ್ತದೆ, ಸದರಿ ಛಾಪಾ ಕಾಗದವನ್ನು ಎಷ್ಟು ಕಾಲಕ್ಕೆ ತಂದಿರುತ್ತಾರೆಂದು ಹೇಳಲು ಆಗುವುದಿಲ್ಲ. ಪತ್ರ ಬರೆಯುವ ಕಾಲಕ್ಕೆ ಖಾತೆ ಎಕ್ಸ್ಟ್ರ್ಯಾಕ್ಟ್ ಮತ್ತು ಕಂದಾಯ ದಾಖಲೆಗಳನ್ನು ಇಟ್ಟುಕೊಂಡಿದ್ದರು. ದಾನ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ . ದಾನ ಪತ್ರ ಆದ ದಿನವೇ ಸದರಿ ಪತ್ರವನ್ನು ನೊಂದಣಿ ಪತ್ರ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ. ನೊಂದಣಿ ಮಾಡಿಸಿಕೊಳ್ಳಲು ಪಂಚಾಯಿತಿಗೆ ದಾನ ಪತ್ರ ಆದ ಒಂದು ವಾರಕ್ಕೆ ಅರ್ಜಿ ಕೊಟ್ಟಿರುತ್ತೇನೆ. ಪಂಚಾಯಿತಿಯವರು ಸದರಿ ಜಾಗಕ್ಕೆ ಖಾತೆ ಕೊಟ್ಟಿರುವುದಿಲ್ಲ. ಪಂಚಾಯಿತಿರವರು ಖಾತೆ ಮಾಡಿರುವುದಿಲ್ಲ ಎಂದು ನಾನು ಇ.ಓ ಮುಂದೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

3. ದಾವಾ ಆಸ್ತಿಯಲ್ಲಿ ಯಾವಾಗ ಕಲ್ಲು ಚಪ್ಪಡಿ ಹಾಕಿರುತ್ತೇನೆಂದು ಹೇಳಲು ಆಗುವುದಿಲ್ಲ. ಪಂಚಾಯಿತಿಯಿಂದ ಪರವಾನಿಗೆ ಪಡೆದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ದಿ.11/09/2020 ರವರೆಗೂ ನಾರಾಯಣಮ್ಮ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ದಿ.11/09/2020 ರಂದು ನಾರಾಯಣಮ್ಮ ಮತ್ತು ಗುಜ್ಜಲಸತ್ಯಮ್ಮ ರವರು ದಾವಾ ಆಸ್ತಿಯನ್ನು ಪ್ರತಿವಾದಿಗೆ 1 ರವರಿಗೆ 1 ಲಕ್ಷ 40 ಸಾವಿರಕ್ಕೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ . ಸದರಿಯವರು ಖರೀದಿಸಿದ ಜಮೀನಿನ ಚಕ್ಕುಬಂದಿ ಪೂ-ರಂಗಮ್ಮನ ಮನೆ, ಪ-ಸರ್ಕಾರಿ ಜಾಗ, ಉ-ಸರ್ಕಾರಿ ಜಾಗ, ದ-ದಾರಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಮೂಲತಃ ನಾರಾಯಣಮ್ಮ ಸೇರಿದ್ದು ಎಂದರೆ ಸರಿ. ನಾರಾಯಣಮ್ಮ ಮತ್ತು ಗುಜ್ಜಲಸತ್ಯಮ್ಮ ಸೇರಿ 2 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಂಡು ಅವರೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

4. ಕ್ರಯ ಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಇಂದಿಗೂ ಸಹ 2 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.